# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 145/2024

| | | | |
|---|---|---|---|
| ಸಾಕ್ಷಿದಾರರ ಹೆಸರು | – | ವೆಂಕಟೇಶ್ | ಸಿಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | – | ಜಗನ್ನಾಥ್ | ಪಿಡಬ್ಲ್ಯೂ-6 |
| ವಯಸ್ಸು | – | ಸು. 40 ವರ್ಷ | ಪ್ರ.ವ.ಬೋ<br>ದಿನಾಂಕ: 28.04.2025 |
| ಉದ್ಯೋಗ | – | ಚಾಲಕರು | |
| ವಾಸ | – | ಹಿರಿಯೂರು ನಗರ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:–**

ಸಾಕ್ಷಿಯು ನಿಪಿ–1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿ–1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–1(ಬಿ)** ಎಂದು ಗುರುತಿಸಲಾಯಿತು. ನಮ್ಮ ಚಿಕ್ಕಮ್ಮನವರಿಗೆ ಹುಳಿಯಾರ್ ರಸ್ತೆಯಲ್ಲಿ ಆಟೋ ಸಂಖ್ಯೆ:ಕೆಎ–17–ಸಿ–6772 ನೇದ್ದರಲ್ಲಿ ಅಪಘಾತವಾಗಿರುತ್ತದೆ. ಈ ಬಗ್ಗೆ ಚಾಸಾ–1 ರವರು ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಅವರು ಹೇಳಿದಂತೆ ನಾನು ನಿಪಿ–1 ರಂತೆ ದೂರನ್ನು ಬರೆದಿರುತ್ತೇನೆ.

ಸಾಕ್ಷಿಗೆ ನೋಟೀಸ್, ನಿಪಿ–2, 3 ಮತ್ತು 6 ರ ದಾಖಲೆಗಳನ್ನು ತೋರಿಸಿದ್ದು, ಅವುಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನಿಪಿ–2, 3 ಮತ್ತು 6 ರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿಪಿ–2(ಸಿ), ನಿಪಿ–3(ಸಿ) ಮತ್ತು ನಿಪಿ–6(ಬಿ)** ಎಂದು ಗುರುತಿಸಲಾಯಿತು. ನಿಪಿ–2, 3 ಮತ್ತು 6 ಕ್ಕೆ ಈಗ ಸುಮಾರು ಎರಡು ವರ್ಷಗಳ ಹಿಂದೆ ಹಿರಿಯೂರು ನಗರ ಪೊಲೀಸ್ ಠಾಣೆಯಲ್ಲಿ ಅಪಘಾತ ಪ್ರಕರಣಕ್ಕೆ ಸಂಬಂಧಿಸಿ ಸಹಿ ಮಾಡಿರುತ್ತೇನೆ. ಪೊಲೀಸ್‌ರು ಅಪಘಾತ ಸ್ಥಳವಾದ ಹಿರಿಯೂರು ನಗರದ ಹರಿಶ್ಚಂದ್ರ ಘಾಟ್‌ನಲ್ಲಿರುವ ಹುಳಿಯಾರ್ ರಸ್ತೆಗೆ ನನ್ನನ್ನು ಕರೆದುಕೊಂಡು ಹೋಗಿದ್ದು ನಿಪಿ–2 ರಂತೆ ಪಂಚನಾಮೆ ಮಾಡಿ ನಿಪಿ–3 ರಂತೆ ನಕಾಶೆ ತಯಾರಿಸಿರುತ್ತಾರೆ. ಸ್ಥಳದಲ್ಲಿ ಭಾವಚಿತ್ರ ತೆಗೆದಿರುತ್ತಾರೆ. ನನ್ನ ಜೊತೆಗೆ ಚಾಸಾ–5 ರವರು ಇದ್ದರು.

ಸಾಕ್ಷಿಯು ನಿಪಿ–7 ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿ–7 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–7(ಬಿ)** ಎಂದು ಗುರುತಿಸಲಾಯಿತು. ನಿಪಿ–7 ಕ್ಕೆ ನಾನು ಈಗ ಸುಮಾರು ಎರಡು ವರ್ಷಗಳ ಹಿಂದೆ ಹಿರಿಯೂರು ನಗರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪೊಲೀಸ್‌ರು ನನಗೆ ಠಾಣೆಯಲ್ಲಿದ್ದ ಆಟೋವನ್ನು ತೋರಿಸಿ ನಿಪಿ–7 ಕ್ಕೆ ಸಹಿ ಪಡೆದಿರುತ್ತಾರೆ. ನನ್ನ ಜೊತೆಗೆ ಚಾಸಾ–5 ರವರೂ ಸಹ ಇದ್ದರು. ನಿಪಿ–7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ–ಸವಾಲುಃ ಮಾನ್ಯ ಎಪಿಪಿಯವರಿಂದಃ–**

ದಿನಾಂಕಃ01.11.2022 ರಂದು ನಿಪಿ–1 ನ್ನು ಚಾಸಾ–1 ರವರು ಹೇಳಿದಂತೆ ಬರೆದಿರುತ್ತೇನೆ ಎಂದರೆ ಸರಿ. ಅದೇ ದಿನ ಪಂಚನಾಮೆಗೆ ಹಾಜರಾಗಲು ಪೊಲೀಸ್‌ರು ನಿಪಿ–6 ರಂತೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಸಂಜೆ 4.30 ಗಂಟೆಗೆ ಪೊಲೀಸ್‌ರು ಅಪಘಾತ ಸ್ಥಳವಾದ ಹಿರಿಯೂರು ನಗರದ ಹುಳಿಯರ್ ರಸ್ತೆಯಲ್ಲಿರುವ ವೇದಾವತಿ ಕಾಲೇಜ್ ಮುಂಭಾಗ ರಾ.ಹೆದ್ದಾರಿ ಸಂಖ್ಯೆಃ150(ಎ) ರಸ್ತೆಯಲ್ಲಿ ಭೇಟಿ ನೀಡಿದ್ದು ಅಲ್ಲಿ ಚಾಸಾ–1 ರವರು ತೋರಿಸಿಕೊಟ್ಟಂತೆ ನನ್ನ ಮತ್ತು ಚಾಸಾ–5 ರವರ ಸಮಕ್ಷಮ ನಿಪಿ–2 ರಂತೆ ಸ್ಥಳ ಪಂಚನಾಮೆ ಮಾಡಿ ನಿಪಿ–3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ.

ದಿನಾಂಕಃ09.12.2022 ರಂದು ಬೆಳಿಗ್ಗೆ 10.30 ಗಂಟೆಗೆ ಹಿರಿಯೂರು ನಗರ ಠಾಣಾ ಆವರಣದಲ್ಲಿ ಪೊಲೀಸ್‌ರು ನನ್ನ ಮತ್ತು ಚಾಸಾ–6 ರವರ ಸಮಕ್ಷಮ ನಿಪಿ–7 ರಂತೆ ಅಮಾನತ್ತು ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಆಟೋರಿಕ್ಷಾ ಸಂಖ್ಯೆಃಕೆಎ–17–ಸಿ–6774 ನೇದ್ದನ್ನು ನನ್ನ ಮತ್ತು ಚಾಸಾ–5 ರವರ ಸಮಕ್ಷಮ ವಶಪಡಿಸಿಕೊಂಡು ಸ್ಥಳದಲ್ಲಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿ.

**ಪಾಟೀ–ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ ಕೆ.ವಿ.ಡಿ. ವಕೀಲರಿಂದಃ–**

ನಿಪಿ–1 ದೂರಿನ ಅಂಶಗಳ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ಚಾಸಾ–1 ರವರು ತಿಳಿಸಿರುತ್ತಾರೆ. ನಿಪಿ–1 ರ ವಿವರ ನನಗೆ ಈಗ ನೆನಪಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಒಟ್ಟು ಮೂರು ಸಹಿಗಳನ್ನು ಮಾಡಿಸಿಕೊಂಡಿರುತ್ತಾರೆ. ಮೂರು ದಾಖಲೆಗಳನ್ನು ನಾನು ಓದಿ ಸಹಿ ಮಾಡಿರುತ್ತೇನೆ. ನಿಪಿ–2 ಮತ್ತು 3 ನ್ನು ಠಾಣೆಯಲ್ಲಿ ಬರೆದುಕೊಂಡು ಹೋಗಿ ಸ್ಥಳದಲ್ಲಿ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಘಟನಾ ಸ್ಥಳದ ಉತ್ತರಕ್ಕೆ– ಹುಳಿಯಾರ್ ರಸ್ತೆ ಇರುತ್ತದೆ. ದಕ್ಷಿಣಕ್ಕೆ– ಮೈಸೂರು ರಸ್ತೆ ಇರುತ್ತದೆ. ಪೂರ್ವಕ್ಕೆ– ವಾಣಿ ಕಾಲೇಜ್ ಇರುತ್ತದೆ. ದಕ್ಷಿಣಕ್ಕೆ– ದೇವಸ್ಥಾನ ಇರುತ್ತದೆ.

ಸಾಕ್ಷಿಯು ತನ್ನ ಕೈಯಲ್ಲಿ ವಾಹನದ ಸಂಖ್ಯೆಯನ್ನು ಬರೆದುಕೊಂಡು ಬಂದು ಸಾಕ್ಷಿ ನುಡಿಯುತ್ತಿರುತ್ತಾರೆ. ಸಾಕ್ಷಿಯು ಸಾಕ್ಷ್ಯದ ವಿಚಾರಗಳನ್ನು ಕೈಯಲ್ಲಿ ಬರೆದುಕೊಂಡು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ 2 ವರ್ಷಗಳಾಗಿದ್ದರಿಂದ ಮರೆತು ಹೋಗಿರುತ್ತದೆ ಎಂದು ಹೇಳುತ್ತಾರೆ. ನಿಪಿ–2 ಪಂಚನಾಮೆಯನ್ನು ವಾಣಿ ಕಾಲೇಜಿನ ಮುಂದೆ ಮಾಡಿರುತ್ತಾರೆ. ನಿಪಿ–7 ನ್ನು ಠಾಣೆಯಲ್ಲಿಯೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ನನ್ನ ಚಿಕ್ಕಮ್ಮನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.